2018 ಕ.ತೀ.ವ 838

## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

## ಶ್ರೀ ಬಿ.ಎನ್. ಕೃಪಾನಂದ –ವಿರುದ್ಧ– ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಮತ್ತೊಬ್ಬರು*

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227 ರ ಅಡಿಯಲ್ಲಿ ರಿಟ್ ಅರ್ಜಿ.**

**1993ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯಿತ್ ರಾಜ್ ಅಧಿನಿಯಮದ 43ಎ ಪ್ರಕರಣದ ಅಡಿಯಲ್ಲಿ ಎದುರುದಾರರು ಅರ್ಜಿದಾರರಿಗೆ ನೀಡಿದ ಕಾರಣ ಕೇಳಿ ನೀಡಿದ ಸೂಚನಾ ಪತ್ರವನ್ನು ಪ್ರಶ್ನಿಸಿ ಮತ್ತು ರದ್ದತಿ ಕೋರಿ ಸದರಿ ರಿಟ್ ಅರ್ಜಿ ಸಲ್ಲಿಕೆ.**

**ಸದರಿ ರಿಟ್ ಅರ್ಜಿಯು ಅಕಾಲಿಕವಾಗಿದ್ದು, ಅರ್ಜಿದಾರರು ಎದುರುದಾರರಿಗೆ ಅವರು ನೀಡಿದ ಸೂಚನಾ ಪತ್ರಕ್ಕೆ ಉತ್ತರವನ್ನು ನೀಡುವಂತೆ ಸೂಚಿಸುತ್ತ ಸದರಿ ರಿಟ್ ಅರ್ಜಿಯನ್ನು ವಿಲೇಖಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಐಎಲ್ಆರ್ 2003(3) ಕೆಎಆರ್ 3035 ಈರಗೆಂಟಪ್ಪ ಆಲಿಯಾಸ್ ವೀರಗೆಂಟಪ್ಪ –ವಿರುದ್ಧ– ಹನುಮಂತ್ ಮತ್ತು ಇತರರು* *(ಉಲ್ಲೇ) 5*

*2. ಐಎಲ್ಆರ್ 2013 ಕೆಎಆರ್ 2198 ಪಿ.ಕೆ. ಮೊಹಮ್ಮದ್ ಹನೀಫ್, ಅಧ್ಯಕ್ಷರು, ದಕ್ಷಿಣ ಕರ್ನಾಟಕ ಸಲಾಫಿ ಚಳುವಳಿ*

*ರಿಟ್ ಅರ್ಜಿ ಸಂ. 8988/2016 (ಎಲ್‌ಬಿ–ಆರ್‌ಇಎಸ್), ದಿನಾಂಕ 30ನೇ ನವೆಂಬರ್, 2016.

*ಸೋಮವಾರಪೇಟೆ –ವಿರುದ್ಧ–*
*ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ,*
*ಸೋಮವಾರಪೇಟೆ ಮತ್ತು ಇತರರು (ಉಲ್ಲೇ) 9*

ಅರ್ಜಿದಾರರ ಪರ: ಶ್ರೀ ನಾಗರಾಜಪ್ಪ ಎ. ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ವಿ. ಶ್ರೀನಿಧಿ, ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ:**

1. ಬಸವನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ, ಅರ್ಜಿದಾರ ಶ್ರೀ ಬಿ.ಎನ್. ಕೃಪಾನಂದ ಇವರು, 2005–10ನೇ ವರ್ಷದಲ್ಲಿ ಹಿಂದಿನ ತಮ್ಮ ಅಧಿಕಾರದ ಅವಧಿಯಲ್ಲಿ, ಸದರಿ ಗ್ರಾಮ ಪಂಚಾಯಿತಿ 'ಅಧ್ಯಕ್ಷ'ನಾಗಿದ್ದಾಗ ಅವರು ಸಭಾಂಗಣ ನಿರ್ಮಾಣಕ್ಕೆ ಮಂಜೂರಾತಿ ನೀಡಿದ ಸಂಬಂಧದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (ಇದರಲ್ಲಿ ಇನ್ನು ಮುಂದೆ 1993ರ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) 43ಎ ಪ್ರಕರಣದ ಅಡಿಯಲ್ಲಿ ದಿನಾಂಕ 01.01.2016ರಂದು ಅನುಬಂಧ–ಎ ಮೂಲಕ ಕಾರಣ ಕೇಳಿ ನೀಡಲಾಗಿದ್ದ ಪ್ರಶ್ನಿತ ಕಾರಣ ಕೇಳುವ ನೋಟೀಸನ್ನು ರದ್ದುಪಡಿಸುವಂತೆ ಕೋರಿ ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದ ಮುಂದೆ ಈ ರಿಟ್ ಅರ್ಜಿಯನ್ನು ದಾಖಲಿಸಿದ್ದಾರೆ. ಅರ್ಜಿದಾರರು 2005–10ನೇ ವರ್ಷದಲ್ಲಿ ಗ್ರಾಮ ಪಂಚಾಯಿತಿಯ ಚುನಾವಣೆಯಲ್ಲಿ ಚುನಾಯಿತರಾಗಿ ಸದರಿ ಗ್ರಾಮ ಪಂಚಾಯಿತಿ 'ಅಧ್ಯಕ್ಷ' ಹುದ್ದೆಯನ್ನು ಹೊಂದಿದ್ದಾರೆ ಮತ್ತು ಐದು ವರ್ಷಗಳ ಮುಕ್ತಾಯದ ತರುವಾಯ, ಅವರು 2015ನೇ ವರ್ಷದಲ್ಲಿ ನಡೆದ ಚುನಾವಣೆಯಲ್ಲಿ ಸದರಿ ಗ್ರಾಮ ಪಂಚಾಯಿತಿಗೆ ಮತ್ತೊಮ್ಮೆ ಮರು ಆಯ್ಕೆಯಾಗಿದ್ದಾರೆ ಮತ್ತು ಪ್ರಶ್ನಿತ ನೋಟೀಸ್‌ನ್ನು, 2005–10ರಲ್ಲಿ ಅವರ ಹಿಂದಿನ ಅಧಿಕಾರದ ಅವಧಿಯಲ್ಲಿ ಸದರಿ

ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಅವರು ಮಾಡಿದ್ದರೆಂದು ಆಪಾದಿಸಲಾದ ದುರ್ನಡತೆಗಾಗಿ ಅವರ ಎರಡನೇ ಅವಧಿಯ ಸಮಯದಲ್ಲಿ ದಿನಾಂಕ 01.01.2016ರಂದು ನೀಡಲಾಗಿದೆ.

2. ಅರ್ಜಿದಾರರು, ಸದರಿ ಕಾರಣ ಕೇಳುವ ನೋಟೀಸ್‌ಗೆ ಮತ್ತು ಸದರಿ ಪ್ರಾಧಿಕಾರದ ಮುಂದೆ ದಿನಾಂಕ 18.02.2016ರಂದು ಹಾಜರಾಗುವಂತೆ ಇಲ್ಲಿನ ಎರಡನೇ ಪ್ರತ್ಯರ್ಜಿದಾರರು ದಿನಾಂಕ 6.2.2016ರಂದು ಅನುಬಂಧ – ಬಿ ಮೂಲಕ ಅವರಿಗೆ ನೀಡಿದ ಸಮನ್ಸ್‌ಗೆ ಸಹ ಯಾವುದೇ ಉತ್ತರವನ್ನು ಸಲ್ಲಿಸುವುದಕ್ಕೆ ಬದಲಾಗಿ, ಈ ನ್ಯಾಯಾಲಯದ ಮುಂದೆ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

3. ದಿನಾಂಕ 17.02.2016ರಂದು ಸದರಿ ರಿಟ್ ಅರ್ಜಿಯ ಮೇಲೆ ನೋಟೀಸ್ ಹೊರಡಿಸುವಾಗ, ಈ ನ್ಯಾಯಾಲಯದ ಸಮನ್ವಯ ಪೀಠಕ್ಕೆ ಕೋರಿದಂತೆ, ಎಂದರೆ ಕಾರಣ ಕೇಳುವ ನೋಟೀಸನ ಅನುಸರಣೆಯಲ್ಲಿ ಈ ವ್ಯವಹರಣೆಗಳಿಗೆ ತಡೆಯಾಜ್ಞೆ ನೀಡಿ ಮದ್ಯಕಾಲೀನ ಆದೇಶವನ್ನು ನೀಡಲಾಗಿದೆ.

4. ಪ್ರತ್ಯರ್ಜಿದಾರ – ರಾಜ್ಯ ಸರ್ಕಾರವು, ದಿನಾಂಕ 29.06.2016ರಂದು ಅದರ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿದೆ ಹಾಗೂ ಕಾರಣ ಕೇಳುವ ನೋಟೀಸ್ ವಿರುದ್ಧದ ಈ ರಿಟ್ ಅರ್ಜಿಯು ಊರ್ಜಿತಯೋಗ್ಯವಾಗಿರುವುದಿಲ್ಲ ಮತ್ತು ಅರ್ಜಿದಾರರು ಕಾನೂನಿಗನುಸಾರವಾಗಿ ಸಕ್ಷಮ ಪ್ರಾಧಿಕಾರಿಯು ನಿರ್ಧರಿಸಬೇಕೆಂದು ಬದ್ಧವಾಗಿರುವ ಸದರಿ ಕಾರಣ ಕೇಳುವ ನೋಟೀಸಿಗೆ ಅವರ ಉತ್ತರವನ್ನು ಸಲ್ಲಿಸುವಂತೆ ಅವರಿಗೆ ನಿರ್ದೇಶಿಸಬೇಕೆಂದು ಕೋರಿ ತನ್ನ ವಾದವನ್ನು ಮಂಡಿಸಿದೆ. 2005–2010ನೇ ಅವಧಿಯಲ್ಲಿ ಸದರಿ ಗ್ರಾಮ ಪಂಚಾಯಿತಿಯ 'ಅಧ್ಯಕ್ಷ'ರಾಗಿ ಪ್ರಸ್ತುತ ಅರ್ಜಿದಾರರು ಕಾರ್ಯನಿರ್ವಹಿಸುತ್ತಿದ್ದಾಗ, ಶ್ರೀಮತಿ ಫಿರೋಜ್ ಭಾನು ಎಂಬುವವರ ಹೆಸರಿನಲ್ಲಿ ಕಟ್ಟಡ ಮಂಜೂರಾತಿ ನೀಡಿದ್ದರೆಂದು ಹಾಗೂ ಶ್ರೀ ಬಿ. ಅಂಜನಾಮೂರ್ತಿ ಎಂಬುವವರ ದೂರಿನ ಆಧಾರದ ಮೇಲೆ, ಗ್ರಾಮ ಪಂಚಾಯಿತಿಯಿಂದ ಸದಸ್ಯರನ್ನು ತೆಗೆದುಹಾಕಲು ಉಪಬಂಧಿಸಲಾಗಿರುವ

ಅಧಿನಿಯಮದ 43ಎ ಪ್ರಕರಣದ ಮೇರೆಗೆ, ಸದರಿ ಉಪಬಂಧದಲ್ಲಿ ಹೇಳಲಾದ ಕೆಲವು ಕಾರಣಗಳ ಆಧಾರದ ಮೇಲೆ, ಇತರ ವಿಷಯಗಳ ಜೊತೆಗೆ ದುರ್ನಡತೆಯನ್ನು ಒಳಗೊಂಡು ಮತ್ತು ಸಂಬಂಧಪಟ್ಟ ಸದಸ್ಯನ ಸಂಬಂಧಿಕರಿಗೆ ಗುತ್ತಿಗೆಗಳನ್ನು ನೀಡಿದ್ದಕ್ಕಾಗಿ ಕಾರಣ ಕೇಳುವ ನೋಟೀಸನ್ನು ನೀಡಿದುದಕ್ಕೆ ಕಾರಣಗಳನ್ನು ಹೇಳಲಾಗಿದೆ. ರಾಜ್ಯವು ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯ ಕಂಡಿಕೆ 6 ಮತ್ತು 7ನ್ನು ಸಿದ್ಧ ಪರಾಮರ್ಶನೆಗಾಗಿ ಈ ಕೆಳಗೆ ಪುನರುಚ್ಚರಿಸಲಾಗಿದೆ.

> 6. ನಿರ್ದೇಶಕರು, (ಸುವರ್ಣ ಗ್ರಾಮೋದಯ) ಮತ್ತು ಐಎಫ್ಎ ಸರ್ಕಾರಕ್ಕೆ ಪರಿಶೀಲನಾ ವರದಿಯನ್ನು ಸಲ್ಲಿಸಿ, ಅದರಲ್ಲಿ, **ಕಟ್ಟಡದ ನಕ್ಷೆಯನ್ನು ಅನುಮೋದಿಸುವುದಕ್ಕೆ ಗ್ರಾಮ ಪಂಚಾಯಿತಿ 'ಅಧ್ಯಕ್ಷ'ರನ್ನು ಪ್ರಾಧಿಕರಿಸುವ ಯಾವುದೇ ಉಪಬಂಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರಲ್ಲಿ ಅವಕಾಶ ಇಲ್ಲವೆಂದು** ವರದಿ ಮಾಡಿದ್ದಾರೆಂದು ವಾದವನ್ನು ಮಂಡಿಸಲಾಗಿದೆ. ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ಅರ್ಜಿದಾರರು ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ, ಸಭಾಂಗಣ ಕಟ್ಟಡದ ನಕ್ಷೆಯನ್ನು ಅನುಮೋದಿಸಿದ್ದಾರೆ. ಇದಲ್ಲದೇ ಅವರು, ಸದರಿ ಗ್ರಾಮ ಪಂಚಾಯಿತಿ 'ಅಧ್ಯಕ್ಷ' ರಾಗಿದ್ದಾಗ, 2010–2015ರ ಅವಧಿಯಲ್ಲಿ ಆ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ವರದಿ ನೀಡಲಾಗಿದೆ.
>
> 7. ಸರ್ಕಾರವು, ಮಾನ್ಯ ಲೋಕಾಯುಕ್ತಕ್ಕೆ **ವರದಿಯನ್ನು ಕಳುಹಿಸಿದ್ದು, ಅದರಲ್ಲಿ, ಗ್ರಾಮವನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 43ಎ ಮತ್ತು 48ನೇ ಪ್ರಕರಣಗಳ ಅಡಿಯಲ್ಲಿ ಪ್ರಸ್ತಾಪಿಸಲಾಗಿದೆ. ಪಂಚಾಯತಿಯು ಪ್ರಸ್ತುತ ಸದಸ್ಯರಾಗಿರುವ ಮತ್ತು ಮಾಜಿ ಅಧ್ಯಕ್ಷರಾಗಿರುವ ಅರ್ಜಿದಾರರ ವಿರುದ್ಧದ ಕ್ರಮವನ್ನು ವರದಿಯ ಪ್ರತಿಯನ್ನು ಹಾಜರುಪಡಿಸಲಾಗಿದ್ದು,**

ಅದನ್ನು ಅನುಬಂಧ–ಆರ್.4 ಎಂದು ಗುರುತಿಸಲಾಗಿದೆ. ನೋಟೀಸಿಗೆ ಉತ್ತರಿಸುವ ಬದಲಾಗಿ ಅರ್ಜಿದಾರನು, ತರಾತುರಿಯಿಂದ ಈ ಮಾನ್ಯ ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ ಎಂದು ವಾದವನ್ನು ಮಂಡಿಸಲಾಗಿದೆ."

5. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎ. ನಾಗರಾಜಪ್ಪ ಇವರು ವರದಿ ಮಾಡಿದ ***ಈರಗೆಂಟಪ್ಪ ಆಲಿಯಾಸ್ ವೀರಗೆಂಟಪ್ಪ –ವಿರುದ್ಧ– ಹನುಮಂತ್ ಮತ್ತು ಇತರರು*** [1] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಮಾನವನ್ನು ಅವಲಂಬಿಸಿದ್ದಾರೆ ಹಾಗೂ ಆರೋಪಿಸಲಾದ ಘಟನೆಯು, ಸಂಬಂಧಪಟ್ಟ ಸದಸ್ಯರ ಅವಧಿಯು 2010ನೇ ವರ್ಷಾವಧಿಯಾದ್ದರಿಂದ, ಅಧಿನಿಯಮದ 43ಎ ಪ್ರಕರಣದ ಉಪಬಂಧಗಳು ಪ್ರಸ್ತುತ ಮೊಕದ್ದಮೆಗೆ ಯಾವ ರೀತಿಯಲ್ಲೂ ಅನ್ವಯವಾಗುವುದಿಲ್ಲ ಮತ್ತು ಐದು ವರ್ಷಗಳ ಅಂತರದ ತರುವಾಯ, ಪ್ರಸ್ತುತ ಅರ್ಜಿದಾರರು 2015ನೇ ಸಾಲಿನಲ್ಲಿ ಮರು–ಆಯ್ಕೆಯಾದಾಗ, ಸಂಬಂಧಪಡದ ಕಾರಣಗಳು ಮತ್ತು ರಾಜಕೀಯ ದ್ವೇಷದ ಕಾರಣಗಳಿಗಾಗಿ, ಆರು ವರ್ಷಗಳ ಅವಧಿಗೆ ಅಥವಾ ಹೆಚ್ಚಿನ ಅವಧಿಗಾಗಿ ಅರ್ಜಿದಾರರನ್ನು ಅನರ್ಹಗೊಳಿಸಲು ಕೋರಿ ಆತನಿಗೆ ಈ ಪ್ರಶ್ನಿತ ನೋಟೀಸನ್ನು ನೀಡಬಾರದಿತ್ತು. ಹಾಗಾಗಿ, ಪ್ರಶ್ನಿತ ನೋಟೀಸು ಸಂಪೂರ್ಣ ಅಧಿಕಾರ ವ್ಯಾಪ್ತಿ ಹೊಂದಿರದೇ ಇರುವುದರಿಂದ ಮತ್ತು ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿರುವುದರಿಂದ, ಭಾರತ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದಿಂದ ರದ್ದುಗೊಳ್ಳುವುದಕ್ಕೆ ತಕ್ಕುದಾಗಿದೆಯೆಂದು ಅವರು ಭಾವಾವೇಶದಿಂದ ವಾದವನ್ನು ಮಂಡಿಸಿದ್ದಾರೆ.

6. ಈ ಕೆಳಗೆ ನಿರೂಪಿಸಿದ 12ನೇ ಪ್ರಕರಣದ (1)ನೇ ಖಂಡದಲ್ಲಿ ಸದಸ್ಯರ ಅನರ್ಹತೆ ಕುರಿತು ವ್ಯವಹರಿಸುವ ಉಪಬಂಧಗಳು, ಒಬ್ಬ ಸದಸ್ಯನನ್ನು, ಆತನು ತಪ್ಪಿತಸ್ಥನೆಂದು ಕಂಡುಬಂದರೆ ಅಥವಾ ಆತನ ಸದಸ್ಯತ್ವದ ಪದಾವಧಿಯಲ್ಲಿ ಗ್ರಾಮ ಪಂಚಾಯಿತಿಯ ನಿಧಿಗಳನ್ನು ದುರುಪಯೋಗಪಡಿಸಿಕೊಂಡಿದ್ದಕ್ಕಾಗಿ ಅಧಿಕಾರದ

1. ಐಎಲ್ಆರ್ 2003(3) ಕೆಎಆರ್ 3035

ದುರ್ಬಳಕೆ ಅಥವಾ ದುರುಪಯೋಗದಲ್ಲಿ ನೇರವಾಗಿ ತೊಡಗಿಕೊಂಡಿದ್ದರೆ ಮಾತ್ರ ಅನರ್ಹಗೊಳಿಸಬಹುದೆಂದು ಸ್ಪಷ್ಟವಾಗಿ ನಿಯಮಿಸುತ್ತದೆ ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ. ಆದುದರಿಂದ, ಪ್ರಸ್ತುತ ಮೊಕದ್ದಮೆಯಲ್ಲಿ ಅವರ ಸದಸ್ಯತ್ವದ ಪದಾವಧಿಯು 2005–10ರ ಕಾಲಾವಧಿಯಲ್ಲಿ ಕೊನೆಗೊಂಡಿತ್ತೆಂದು ಮತ್ತು ಕಳೆದ ಅವಧಿಯಲ್ಲಿ ಅವರ ಸದಸ್ಯತ್ವದ ಅನರ್ಹತೆಯಲ್ಲಿ ಪರಿಣಮಿಸಬಹುದಾಗಿದ್ದ ಆರೋಪಿಸಲಾದ ಅವರ ಯಾವುದೇ ದುರ್ನಡತೆಯನ್ನು ವಿವರಿಸಲು ಅವರನ್ನು ಕರೆಯಲಾಗುವುದಿಲ್ಲವೆಂದು ಹಾಗೂ ಅವರ ಸದಸ್ಯತ್ವದ ಪ್ರಸ್ತುತ ಪದಾವಧಿಯಲ್ಲಿ ಸದಸ್ಯರಾಗಿ ಅವರ ಕಾರ್ಯನಿರ್ವಹಣೆಗೆ ಸಂಬಂಧಿಸಿರದ ಆರೋಪಿತ ದುರ್ನಡತೆ ಅಥವಾ ಘಟನೆಗಾಗಿ, ಹೊಸ ಅವಧಿಗೆ ಅವರ ಮರು ಆಯ್ಕೆಯಾದ 2015–2020ರ ಪ್ರಸ್ತುತ ಅವಧಿಗೆ ಅನರ್ಹಗೊಳಿಸಲು ಸಾಧ್ಯವಿಲ್ಲವೆಂದು ಮಾನ್ಯ ನ್ಯಾಯವಾದಿಗಳು ಪುನರುಚ್ಚರಿಸಿದ್ದಾರೆ.

7. ಅವರು, ***ಈರಗಂಟೆಪ್ಪ ಅಲಿಯಾಸ್ ವೀರಗಂಟೆಪ್ಪ –ವಿರುದ್ಧ– ಹನುಮಂತ್ ಮತ್ತು ಇತರರು*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ವಿಭಾಗೀಯ ಪೀಠದ ತೀರ್ಪಿನ ಮೇಲೆ ನಿರ್ದಿಷ್ಟವಾಗಿ ಅದರ 6ನೇ ಕಂಡಿಕೆಯ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಅಭ್ಯರ್ಥಿಯು ಪದಧಾರಣ ಮಾಡಿದ ಕಾಲಾವಧಿಗೆ ಸಂಬಂಧಿಸಿದಂತೆ ಉದ್ಭವಿಸುವಂಥ ಸನ್ನಿವೇಶಗಳಿಗೆ 43ಎ ಪ್ರಕರಣವು ಸೀಮಿತವಾಗಿದ್ದು, ಅವು ನ್ಯಾಯಾಲಯವು ಜಾರಿಗೆ ತರುವ ಮಾನದಂಡಗಳಾಗಿವೆ ಹಾಗೂ ಅಭ್ಯರ್ಥಿಯು ಹುದ್ದೆಯನ್ನು ವಹಿಸಿಕೊಂಡ ನಂತರ ಮತ್ತು ಹುದ್ದೆಯ ಕಾಲಾವಧಿಯಲ್ಲಿ ಎಸಗಿದ ಕೃತ್ಯಗಳು ಅಥವಾ ದುರ್ನಡತೆಗೆ 43ಎ ಪ್ರಕರಣವು ಸೀಮಿತವಾಗಿದೆಯೇ ಹೊರತು ಹಿಂದೆ ನಡೆದ ಅಥವಾ ಆತನನ್ನು ಅನರ್ಹಗೊಳಿಸಬೇಕೆಂದು ಉದ್ದೇಶಿಸಿರುವ ಆತನು ಸದಸ್ಯನಾಗಿ ಪದದಲ್ಲಿ ಇದ್ದ ಕಾಲಾವಧಿಗೆ ಪೂರ್ವದಲ್ಲಿನ ಅವಧಿಗಾಗಿ ಅಲ್ಲವೆಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದವನ್ನು ಮಂಡಿಸಿದ್ದಾರೆ.

8. ಇನ್ನೊಂದೆಡೆ ರಾಜ್ಯದ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿ. ಶ್ರೀನಿಧಿ, ಸಹಾಯಕ ಸರ್ಕಾರಿ ನ್ಯಾಯವಾದಿ ಇವರು, ಪ್ರತಿವಾದಿಯು ನೀಡಿದ

ಕಾರಣ ತೋರಿಸುವ ನೋಟೀಸಿನ ವಿರುದ್ಧ ಮಾತ್ರ ನಿರ್ದೇಶಿಸುವ ರಿಟ್ ಅರ್ಜಿಯು ಅವಸರದಲ್ಲಿ ಸಲ್ಲಿಸಿದ ಅರ್ಜಿಯಾಗಿದ್ದು, ಈ ನ್ಯಾಯಾಲಯವು, ಆರೋಪಗಳ ಗುಣಾರ್ಹತೆಗಳನ್ನಾಗಲಿ ಅಥವಾ ಅರ್ಜಿದಾರರ ಸಂಭವನೀಯ ವಿವರಣೆಯನ್ನಾಗಲಿ ಪರಿಶೀಲಿಸಲಾಗುವುದಿಲ್ಲವಾದ್ದರಿಂದ, ಅಧಿನಿಯಮ, 1993ರ 64ನೇ ಪ್ರಕರಣದ ಉಪಬಂಧಗಳು, ನಿಗಮಿತ ನಿಕಾಯವಾಗಿ ಗ್ರಾಮ ಪಂಚಾಯಿತಿಯು ಮಾತ್ರವೇ ಕಟ್ಟಡ ನಿರ್ಮಾಣ ಮಂಜೂರಾತಿಯನ್ನು ನೀಡಲು ಸಾಧ್ಯವೆಂದು, ಅರ್ಜಿದಾರನು ಏಕತ್ರವಾಗಿ 2005–10ನೇ ಹಿಂದಿನ ಅವಧಿಯಲ್ಲಿ ಗ್ರಾಮ ಪಂಚಾಯಿತಿಯ 'ಅಧ್ಯಕ್ಷ'ನಾಗಿ ಅಂಥ ಯಾವುದೇ ಕಟ್ಟಡದ ಮಂಜೂರಾತಿಯನ್ನು ನೀಡುವ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರಲಿಲ್ಲವೆಂದು, ಹಾಗಾಗಿ, ಈ ಸಂಬಂಧದಲ್ಲಿ ಅವರ ವಿವರಣೆ ಕೇಳಲು ಸಮರ್ಥನೀಯ ಕಾರಣಗಳಿವೆಯೆಂದು ಹಾಗೂ ಸಕ್ಷಮ ಪ್ರಾಧಿಕಾರವು ಅವರ ಸಾಬೀತಾದ ದುರ್ನಡತೆ ಅಥವಾ ಕಾನೂನಿನ ಉಪಬಂಧಗಳನ್ನು ಮೀರಿ ಕಾರ್ಯನಿರ್ವಹಿಸಿದ ಬಗ್ಗೆ ತೀರ್ಮಾನಕ್ಕೆ ಬಂದರೆ, ಅದು ಪ್ರಸ್ತುತ ಅವಧಿಗಾಗಿ ಗ್ರಾಮ ಪಂಚಾಯಿತಿಯ ಸದಸ್ಯನ ಅನರ್ಹತೆಯಲ್ಲಿ ಪರಿಣಮಿಸಬಹುದು ಅಥವಾ ಪರಿಣಮಿಸದೆ ಇರಬಹುದು ಎಂದು ವಾದಿಸಿದ್ದಾರೆ.

9. ಶ್ರೀ ಶ್ರೀನಿಧಿಯವರು, ***ಪಿ.ಕೆ. ಮೊಹಮ್ಮದ್ ಹನೀಫ್, ಅಧ್ಯಕ್ಷರು, ದಕ್ಷಿಣ ಕರ್ನಾಟಕ ಸಲಾಫಿ ಚಳುವಳಿ, ಸೋಮವಾರಪೇಟೆ –ವಿರುದ್ಧ– ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಸೋಮವಾರಪೇಟೆ ಮತ್ತು ಇತರರು***[2] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ತೀರ್ಪಿನ ಮೇಲೆ ಸಹ ಅವಲಂಬಿತರಾಗಿದ್ದು, ಸದರಿ ತೀರ್ಪಿನ 15ನೇ ಕಂಡಿಕೆಯಲ್ಲಿ, ಮಾನ್ಯ ಏಕಪೀಠ ನ್ಯಾಯಾಧೀಶರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ನೀಡಿದ ಇಂತಹುದೇ ಕಟ್ಟಡ ಮಂಜೂರಾತಿ ಅನುಮತಿಯನ್ನು ಅದು ಕಾನೂನಿನ ಅಧಿಕಾರ ಹೊಂದಿರುವುದಿಲ್ಲವೆಂದು ರದ್ದುಗೊಳಿಸಿದ್ದಾರೆ. ಸದರಿ ತೀರ್ಪಿನ 15ನೇ ಕಂಡಿಕೆಯನ್ನು ಸಿದ್ಧ ಪರಾಮರ್ಶನೆಗೆ ಈ ಕೆಳಗಿನಂತೆ ಸಹ ನಮೂದಿಸಲಾಗಿದೆ:

2. ಐಎಲ್‌ಆರ್ 2013 ಕೆಎಆರ್ 2198

*"15. ಪ್ರಸ್ತುತ ಮೊಕದ್ದಮೆಯಲ್ಲಿ, ದಿನಾಂಕ 30.10.2010ರ ಪಂಚಾಯತಿಯ ನಿರ್ಣಯದಲ್ಲಿ ಅದು ಪ್ರತ್ಯಾಯೋಜಿಸಿದ ಅಧಿಕಾರದ ಆಧಾರದ ಮೇಲೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು, ಕಟ್ಟಡದ ನಿರ್ಮಾಣಕ್ಕೆ ಅನುಬಂಧ–ಡಿ ಪ್ರಕಾರ ಅನುಮತಿಯನ್ನು ನೀಡಿರುವರೆಂದು ಕಂಡುಬರುತ್ತದೆ. ಅರ್ಜಿದಾರ ಮತ್ತು 1ರಿಂದ 3ರವರೆಗಿನ ಪ್ರತ್ಯರ್ಜಿದಾರರ ಪರ ವಾದಿಸಿದ ಮಾನ್ಯ ನ್ಯಾಯವಾದಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವ ಆತನ ಅಧಿಕಾರಗಳನ್ನು ಗ್ರಾಮ ಪಂಚಾಯಿತಿಯು ಪ್ರತ್ಯಾಯೋಜಿಸಲು ಅಧಿಕಾರ ನೀಡುವ ಕುರಿತು ಅಧಿನಿಯಮದ ಯಾವುದೇ ಶಾಸನಾತ್ಮಕ ಉಪಬಂಧದ ಕಡೆ ಗಮನ ಸೆಳೆದಿಲ್ಲ. ಆದುದರಿಂದ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಕಟ್ಟಡ ನಿರ್ಮಿಸಲು ಅನುಮತಿ ನೀಡುವ ಪ್ರಶ್ನೆಯು ಕಾನೂನಿನ ಅಧಿಕಾರವನ್ನು ಹೊಂದಿರುವುದಿಲ್ಲ. ಗ್ರಾಮ ಪಂಚಾಯಿತಿ ಮಾತ್ರವೇ, ಪಂಚಾಯಿತಿ ಪ್ರದೇಶದ ಒಳಗೆ ಕಟ್ಟಡಗಳನ್ನು ನಿರ್ಮಿಸಲು ಅನುಮತಿಯನ್ನು ನೀಡಲು ಅಧಿಕಾರ ಹೊಂದಿರುತ್ತದೆ. ದಿನಾಂಕ 30.10.2010ರ ಪಂಚಾಯಿತಿಯು ನಿರ್ಣಯವು (ಅನುಬಂಧ–ಆರ್–3) ಅಸಿಂಧುವಾದುದಾಗಿದೆ. ಹಾಗಿಲ್ಲದಿದ್ದಾಗ್ಯೂ, ಅನುಬಂಧ–ಡಿ ಪ್ರಕಾರ ಅನುಮತಿ ನೀಡುವುದು, 3 ಮತ್ತು 5ನೇ ನಿಯಮಗಳ ಅನನುಪಾಲನೆಯು ಕಾರಣಕ್ಕಾಗಿ ಕಾನೂನು ಬಾಹಿರವಾಗಿರುತ್ತದೆ. 3ನೇ ನಿಯಮದ ಮೇರೆಗೆ ಸಾರ್ವಜನಿಕ ನೋಟೀಸ್‌ನ್ನು ಗ್ರಾಮ ಪಂಚಾಯಿತಿಯು ಹೊರಡಿಸಿದ್ದು, 2ನೇ ಪ್ರತಿವಾದಿಯಾಗಲಿ ಅಥವಾ ನಿರ್ಮಾಣವನ್ನು ವಿರೋಧಿಸುತ್ತಿರುವ ಯಾರೇ ಇತರ ವ್ಯಕ್ತಿಯಾಗಲಿ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿತ್ತು. ವಾಸ್ತವಾಗಿ, ಹಲವಾರು ವ್ಯಕ್ತಿಗಳು, ಪಂಚಾಯಿತಿಯನ್ನು ಒಳಗೊಂಡು ಚುನಾಯಿತ ಪ್ರತಿನಿಧಿಗಳಿಗೆ, ಮಾನ್ಯ ಗೃಹ ಮಂತ್ರಾಲಯ ಮತ್ತು ಇತರ ಪ್ರಾಧಿಕಾರಿಗಳಿಗೆ ವಿವಾದದಲ್ಲಿರುವ ಕಟ್ಟಡ ನಿರ್ಮಾಣವನ್ನು ವಿರೋಧಿಸಿ ದಿನಾಂಕ 02.03.2011ರ ಅನುಬಂಧ–ಆರ್1 ಪ್ರಕಾರ*

ಒಂದು ಮನವಿಯನ್ನು ಕಳುಹಿಸಿದ್ದಾರೆ. ಆದುದರಿಂದ, ಪ್ರಶ್ನೆಯಲ್ಲಿರುವ ಜಮೀನಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಅರ್ಜಿದಾರರಿಗೆ ಅನುಮತಿ ನೀಡಿ ದಿನಾಂಕ 06.03.2011ರ ಅನುಬಂಧ–ಡಿ ಪ್ರಕಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನೀಡಿದ ಅನುಮತಿಯು ಕಾನೂನುಬಾಹಿರವಾದುದಾಗಿದೆ ಮತ್ತು ಅದಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಕಾನೂನಿನ ಪ್ರಭುತ್ವವು, ಪ್ರಜಾಪ್ರಭುತ್ವ ಪದ್ಧತಿಯ ಆತ್ಮ ಮತ್ತು ಆಧಾರಸ್ತಂಭವಾಗಿದೆ. ಹಾಗೂ ಅದನ್ನು ಎಲ್ಲಾ ಸಂಸ್ಥೆಗಳು ಪಾಲಿಸಬೇಕಾಗುತ್ತದೆ. ಕಾನೂನು, ಶಾಸನದ ಇಚ್ಛೆಯ ವಿಧಿ–ವಿಹಿತ ಅಭಿವ್ಯಕ್ತಿಯಾಗಿದೆ. ವಿಶದವಾಗಿ ಹೇಳಬೇಕೆಂದರೆ, ಸಾಮಾನ್ಯವಾಗಿ, ಕಾನೂನು ನಿಯಮಗಳ ಸಂಚಯವಾಗಿದ್ದು, ಅವುಗಳನ್ನು ನ್ಯಾಯಾಲಯವು ಗುರುತಿಸಿದ ಕಾನೂನಾತ್ಮಕ ಹಕ್ಕುಗಳನ್ನು ಮತ್ತು ಕಾನೂನಾತ್ಮಕ ಬಾಧ್ಯತೆಗಳನ್ನು ಕುರಿತು ನಿರ್ಧರಿಸಲು ವಿಧಿಸಲಾಗಿದೆ. ನಿರ್ದಿಷ್ಟ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಕಾನೂನು ಅಗತ್ಯಪಡಿಸಿದಾಗ, ಅದನ್ನು ಅದೇ ರೀತಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ರಾಮಚಂದ್ರ ಕೇಶವ ಅಡ್ಕೆ (ಮೃತರಾಗಿದ್ದಾರೆ) –ವಿರುದ್ಧ– ಗೋವಿಂದ ಜೋತಿ ಚವರೆ ಮತ್ತು ಇತರರು ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕೆಲವು ಕೆಲಸಗಳನ್ನು ಮಾಡಲು, ಕೆಲವು ರೀತಿಯಲ್ಲಿ ಅಧಿಕಾರಗಳನ್ನು ನೀಡಿರುವಲ್ಲಿ, ಆ ಕೆಲಸಗಳನ್ನು ಆ ರೀತಿಯಲ್ಲಿ ಮಾಡಬೇಕೇ ಹೊರತು ಬೇರೆ ರೀತಿಯಲ್ಲಿ ಅಲ್ಲ ಮತ್ತು ಕಾರ್ಯನಿರ್ವಹಣೆಯ ಇತರ ವಿಧಾನಗಳನ್ನು ಅತ್ಯಾವಶ್ಯಕವಾಗಿ ನಿಷೇಧಿಸಬೇಕು. ಬಾಬು ವರ್ಗೀಸ್ ಮತ್ತು ಇತರರು –ವಿರುದ್ಧ– ಕೇರಳ ಬಾರ್ ಕೌನ್ಸಿಲ್ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಒಂದು ನಿರ್ದಿಷ್ಟ ಕಾರ್ಯವನ್ನು ನಿರ್ವಹಿಸುವ ರೀತಿಯನ್ನು ಯಾವುದೇ ಶಾಸನದ ಅಡಿಯಲ್ಲಿ ನಿಯಮಿಸಿದರೆ, ಆ ಕಾರ್ಯವನ್ನು ಆ ರೀತಿಯಲ್ಲೇ ನಿರ್ವಹಿಸಬೆಕು. ಆದುದರಿಂದ, ಈ ಮುಂದಿನಂತೆ ಇದನ್ನು ನಿರ್ವಹಿಸಲಾಗಿದೆ:

"ಒಂದು ನಿರ್ದಿಷ್ಟ ಕಾರ್ಯವನ್ನು ನಿರ್ವಹಿಸುವ ರೀತಿಯನ್ನು ಯಾವುದೇ ಶಾಸನದ ಅಡಿಯಲ್ಲಿ ನಿಯಮಿಸಲಾಗಿದ್ದರೆ ಆ ಕಾರ್ಯವನ್ನು ಆ ರೀತಿಯಲ್ಲೇ ನಿರ್ವಹಿಸಬೇಕೇ ಹೊರತು ಬೇರೆ ರೀತಿಯಲ್ಲಿ ಅಲ್ಲ ಎಂಬುದು ಬಹಳ ಹಿಂದೆಯೇ ಇತ್ಯರ್ಥವಾದ ಕಾನೂನಿನ ಮೂಲ ತತ್ವವಾಗಿದೆ. ಈ ನಿಯಮದ ಮೂಲವು, ***ಟೇಲರ್ –ವಿರುದ್ಧ– ಟೇಲರ್*** ಮೊಕದ್ದಮೆಯಲ್ಲಿನ ನಿರ್ಣಯದಲ್ಲೇ ಕಂಡುಬರುತ್ತದೆ. ಇದರ ನಂತರ ***ನಾಜಿರ್ ಅಹ್ಮದ್ –ವಿರುದ್ಧ– ಕಿಂಗ್ ಎಮಿರೋರೋ*** ಮೊಕದ್ದಮೆಯಲ್ಲಿ **ಲಾರ್ಡ್ ರೋಕೆ** ಅವರು ಈ ಕೆಳಗಿನಂತೆ ಹೇಳಿದ್ದಾರೆ:

"ಕೆಲವು ಕಾರ್ಯಗಳನ್ನು ಮಾಡಲು ಕೆಲವು ರೀತಿಯಲ್ಲಿ ಅಧಿಕಾರಗಳನ್ನು ನೀಡಿರುವಲ್ಲಿ, ಆ ಕೆಲಸವನ್ನು ಅದೇ ರೀತಿಯಲ್ಲಿ ಮಾಡಬೇಕೇ ಹೊರತು ಬೇರೆ ರೀತಿಯಲ್ಲಿ ಅಲ್ಲ."

*ಆನಂತರ ಈ ನಿಯಮವನ್ನು, ಈ ನ್ಯಾಯಾಲಯದಲ್ಲಿ **ರಾವ್ ಶಿವ ಬಹದ್ದೂರ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ** ಮೊಕದ್ದಮೆಯಲ್ಲಿ ಪುನಃ **ದೀಪಚಂದ್ –ವಿರುದ್ಧ– ರಾಜಸ್ಥಾನ ರಾಜ್ಯ** ಮೊಕದ್ದಮೆಯಲ್ಲಿ ಅನುಮೋದಿಸಲಾಗಿದೆ. ಈ ಮೊಕದ್ದಮೆಗಳನ್ನು, ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠವು, ಉತ್ತರ ಪ್ರದೇಶ ರಾಜ್ಯ ಮತ್ತು ಸಿಂಘಾರಾ ಸಿಂಗ್ ಮೊಕದ್ದಮೆಯಲ್ಲಿ ಪರ್ಯಾಲೋಚಿಸಿದೆ ಹಾಗೂ ನಾಜಿರ್ ಅಹಮದ್ ಮೊಕದ್ದಮೆಯಲ್ಲಿ ವಿಧಿಸಿದ ನಿಯಮವನ್ನು ಎತ್ತಿ ಹಿಡಿಯಲಾಗಿದೆ. ಅಂದಿನಿಂದ ಈ ನಿಯಮವನ್ನು ನ್ಯಾಯಾಲಯಗಳು, ಅಧಿಕಾರ ವ್ಯಾಪ್ತಿಯ ಚಲಾವಣೆಗೆ ಸಂಬಂಧಿಸಿದಂತೆ ಅನ್ವಯಿಸುತ್ತಾ ಬಂದಿವೆ ಮತ್ತು ಇದನ್ನು ಆಡಳಿತಾತ್ಮಕ ಕಾನೂನಿನ ಸತ್ಪರಿಣಾಮಕಾರಿ ತತ್ವವನ್ನಾಗಿ ಸಹ ಗುರುತಿಸಲಾಗುತ್ತಿದೆ."*

10. ಪ್ರತ್ಯರ್ಜಿದಾರ–ರಾಜ್ಯದ ಪರ ಹಾಜರಾಗಿರುವ ಮಾನ್ಯ ಶ್ರೀ ವಿ. ಶ್ರೀನಿಧಿ ಇವರೂ ಸಹ ಒಬ್ಬ ಸದಸ್ಯನ ಹಿಂದಿನ ಪದಾವಧಿಗೆ ಸಂಬಂಧಿಸಿದ ಆತನ ಆಪಾದಿಸಲಾದ ದುರ್ನಡತೆ ವಿರುದ್ಧ ಅಧಿನಿಯಮದ 43ಎ ಪ್ರಕರಣದಲ್ಲಿ ಯಾವುದೇ ನಿಷೇಧ ಇರುವುದಿಲ್ಲವೆಂದು ಹಾಗೂ 43ಎ ಪ್ರಕರಣದ ಕಾರ್ಯಾಚರಣೆಯನ್ನು ಸದಸ್ಯನ ಪ್ರಸ್ತುತ ಅವಧಿಗೆ ಮಾತ್ರ ನಿರ್ಬಂಧಿಸಲು ಸಾಧ್ಯವಿಲ್ಲವೆಂದು, ದುರ್ನಡತೆಯು ಸಾಬೀತುಪಟ್ಟಾಗ್ಯೂ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಅಥವಾ "ಅಧ್ಯಕ್ಷ"ನಾಗಿ ಕಳೆದ ಅಥವಾ ಹಿಂದಿನ ಅವಧಿಯಲ್ಲಿ ಆತನು ಎಸಗಿದನೆಂದು ಆಪಾದಿಸಲಾದ ದುರ್ನಡತೆಗಾಗಿ ಪ್ರಸ್ತುತ ಅವಧಿಯಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಪದಧಾರಣೆ ಮಾಡಲು ಅಂಥ ಸದಸ್ಯನನ್ನು ಅನರ್ಹಗೊಳಿಸಬೇಕೆಂದು ನಿರ್ಣಯಿಸಬಹುದಾಗಿದೆ ಎಂದು ವಾದವನ್ನು ಮಂಡಿಸಿದ್ದಾರೆ.

11. ಮಾನ್ಯ ನ್ಯಾಯವಾದಿಗಳ ವಾದವನ್ನು ನಾನು ಸುದೀರ್ಘವಾಗಿ ಆಲಿಸಿದ್ದೇನೆ ಮತ್ತು ನ್ಯಾಯಸ್ಥಾನದಲ್ಲಿ ಮಾಡಲಾದ ಪರಸ್ಪರ ವಾದಗಳಿಗೆ ನನ್ನ ಪಕ್ಷಪಾತರಹಿತ ಪರಿಹಾರ ನೀಡಿದ್ದೇನೆ ಹಾಗೂ 1993ರ ಅಧಿನಿಯಮದ ಸುಸಂಗತ ಉಪಬಂಧಗಳನ್ನು ಮತ್ತು ಉಲ್ಲೇಖಿಸಲಾದ ತೀರ್ಪುಗಳನ್ನು ಕುರಿತು ಸಹ ಮನಗಾಣಿಸಿದ್ದೇನೆ. ಸಿದ್ಧ ಪರಾಮರ್ಶನಕ್ಕಾಗಿ ಈ ಕೆಳಗಿನ ಸುಸಂಗತ ಉಪಬಂಧಗಳನ್ನು ಮನರುಚ್ಚರಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ.

> *"**12. ಸದಸ್ಯರ ಅನರ್ಹತೆ:–** ಒಬ್ಬ ವ್ಯಕ್ತಿಯು, ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು,–*
>
> *(ಎ) ರಿಂದ (ಕೆ) ವರೆಗೆ .......*
>
> *(ಎಲ್) ಅವನು, ತಪ್ಪಿತಸ್ಥನೆಂದು ರುಜುವಾತಾದಲ್ಲಿ, ಗ್ರಾಮ ಪಂಚಾಯಿತಿಯ ಯಾವುದೇ ಯೋಜನೆ, ನಕ್ಷೆ ಅಥವಾ*

*ಕಾರ್ಯಯೋಜನೆಯನ್ನು ಕಾರ್ಯಗತಗೊಳಿಸಲು, ಪಂಚಾಯಿತಿಯ ಸದಸ್ಯನಾಗಿ ಅಧಿಕಾರ ಅಥವಾ ಪ್ರಾಧಿಕಾರದ ದುರುಪಯೋಗ ಅಥವಾ ದುರ್ಬಳಕೆಯ ಯಾವುದೇ ಕಾರ್ಯದಲ್ಲಿ ನೇರವಾಗಿ ಭಾಗಿಯಾಗಿದ್ದಲ್ಲಿ ಅಥವಾ ತನ್ನ ಸದಸ್ಯತ್ವದ ಅವಧಿಯ ಸಮಯದಲ್ಲಿ ಪಂಚಾಯಿತಿಯ ನಿಧಿಗಳು ಅಥವಾ ಇತರೇ ಆಸ್ತಿಗಳನ್ನು ದುರುಪಯೋಗಪಡಿಸಿಕೊಂಡಿದ್ದಲ್ಲಿ;*

*ಅನರ್ಹನಾಗತಕ್ಕದ್ದು.*

***ಪ್ರಕರಣ 43ಎ, ಸದಸ್ಯರನ್ನು ತೆಗೆದು ಹಾಕುವುದು:–*** *(1) ಸರ್ಕಾರವು ಸೂಕ್ತವೆಂದು ಅಭಿಪ್ರಾಯಪಟ್ಟರೆ ಗ್ರಾಮ ಪಂಚಾಯಿತಿಯ ಶಿಫಾರಸ್ಸಿನ ಮೇಲೆ, ಅಥವಾ ಅನ್ಯಥಾ ಆತನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಅವಶ್ಯಕವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ,*

*(i) ಅವನು, ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ದುರ್ನಡತೆಯ ಅಥವಾ ಯಾವುದೇ ಅಪಕೀರ್ತಿ ನಡತೆಯ ತಪ್ಪಿತಸ್ಥನಾದರೆ;*

*(ii) ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ, ಅಥವಾ ಕರ್ತವ್ಯಗಳನ್ನು ಮಾಡುವಲ್ಲಿ ಸತತವಾಗಿ ಅಜಾಗರೂಕನಾದಲ್ಲಿ;*

*(ಎ) ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಪ್ರಮಾಣೀಕರಿಸಬಹುದಾದಂತೆ ಆ ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅಸಮರ್ಥತೆ ಹೊಂದಿದ್ದಲ್ಲಿ;*

*(ಬಿ) ದಿವಾಳಿತನ ಅಥವಾ ಅಸ್ವಸ್ಥ ಚಿತ್ತದ ಪರಿಣಾಮವಾಗಿ,*

*(iii)* ಪಂಚಾಯಿತಿಯ ಒಂದಾದ ಮೇಲೊಂದು ಬರುವ ನಾಲ್ಕು ಸಭೆಗಳಿಗೆ ಹಾಜರಾಗಲು ವಿಫಲನಾದಲ್ಲಿ, ಮತ್ತು ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಪ್ರಕರಣದಲ್ಲಿ, ಒಂದಾದ ಮೇಲೊಂದರಂತೆ ಎರಡು ಸಭೆಗಳನ್ನ ಕರೆಯಲು ವಿಫಲವಾದಲ್ಲಿ, ಅದರಲ್ಲಿ ಯಾವುದು ಯುಕ್ತ ಅಥವಾ ಅಗತ್ಯವಾಗಿದೆಯೋ ಅದು;
ಅಥವಾ

*(iv)* ಸದಸ್ಯನು, ಪರಿಗಣನೆಗಾಗಿ ಚುನಾವಣಾ ಸಮಯದಲ್ಲಿ ಸಂದರ್ಭಾನುಸಾರದಂತೆ, ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯ ಸದಸ್ಯ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಹುದ್ದೆಯನ್ನು ವ್ಯಾಪಾರದಂತೆ ಸಂದರ್ಭಾನುಸಾರ ಗ್ರಾಮ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯ ಯಾರೇ ಮತದಾರ ಅಥವಾ ಸದಸ್ಯನನ್ನು ಒತ್ತಾಯ ಅಥವಾ ಮೋಸದಿಂದ ಮರುಳು ಮಾಡುವ ಮೂಲಕ;

*(v)* ಪಂಚಾಯಿತಿಯು ಯಾವುದೇ ಕಾರ್ಯವನ್ನು ಕಾರ್ಯಗತಗೊಳಿಸಲು, ಕರಾರು ಜನ್ಯ ಅಥವಾ ಅನ್ಯಥಾ, ಕುಟುಂಬದಲ್ಲಿ ಹತ್ತಿರದ ಸಂಬಂಧಿಯಾಗಿರುವ ಯಾರೇ ವ್ಯಕ್ತಿಯೊಂದಿಗೆ ಅಥವಾ ಅನ್ಯಥಾ ಅಂಥ ಸಂಘಟನೆ, ಅಥವಾ ಅನ್ಯಥಾ ಸಮಿತಿಯ ಪಾಲುಗಾರ, ನೌಕರ ಅಥವಾ ಸದಸ್ಯನಾಗಿ ಅಂಥ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆಯಲ್ಲಿ, ಸಹವರ್ತಿಯಾಗಿ ನೇರವಾಗಿ ಭಾಗಿಯಾಗಿರುವುದು ಕಂಡುಬಂದಲ್ಲಿ, ಅದು ಯಾವೊಬ್ಬ ಸದಸ್ಯನನ್ನು ತೆಗೆದು ಹಾಕಬಹುದು.

***ವಿವರಣೆ:*** *ಈ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದಲ್ಲಿ ಹತ್ತಿರದ ಸಂಬಂಧಿ ಎಂದರೆ,–*

*(ಎ) ಆಕೆ ಅಥವಾ ಅತನೊಂದಿಗೆ ವಾಸಿಸುತ್ತಿರುವ ವ್ಯಕ್ತಿಯ ಪತ್ನಿ ಅಥವಾ ಪತಿ;*

*(ಬಿ) ಮಗ ಅಥವಾ ಮಗಳು ಅಥವಾ ಮಲ–ಮಗ ಅಥವಾ ಮಲ–ಮಗಳು;*

*(ಸಿ) ರಕ್ತಸಂಬಂಧಿ ಅಥವಾ ವಿವಾಹ ಸಂಬಂಧದ ಮೂಲಕ ಅಂಥ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿರುವ, ಸಂಬಂಧಿತನಾಗಿರುವ ಇತರ ಯಾರೇ ವ್ಯಕ್ತಿ.*

*(2) ಹಾಗೆ ತೆಗೆದುಹಾಕಲಾದ, ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಸದಸ್ಯನನ್ನು, ಅಂಥ ಸದಸ್ಯನಾಗಿ ಪ್ರಕಾರ್ಯ ನಿರ್ವಹಿಸುವುದರಿಂದ ತಡೆಯತಕ್ಕದ್ದು ಮತ್ತು* ***ತರುವಾಯದ ಆರು ವರ್ಷಗಳಗಾಗಿ*** *ಯಾವುದೇ ಪಂಚಾಯಿತಿಗೆ ಈ ಅಧಿನಿಯಮದ 12ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದರಿಂದ ಅನರ್ಹಗೊಳಿಸತಕ್ಕದ್ದು.*

***ಪ್ರಕರಣ 64. ಕಟ್ಟಡಗಳ ನಿರ್ಮಾಣದ ನಿಯಂತ್ರಣ:–*** *(1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು, ಯಾರೇ ವ್ಯಕ್ತಿಯು,* ***ಗ್ರಾಮ ಪಂಚಾಯಿತಿಯಿಂದ ಲಿಖಿತ ಅನುಮತಿಯಿಲ್ಲದೆ*** *ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಬದಲಾಯಿಸತಕ್ಕದ್ದಲ್ಲ ಅಥವಾ ಅದಕ್ಕೆ ಸೇರ್ಪಡೆ ಮಾಡತಕ್ಕದ್ದಲ್ಲ ಅಥವಾ ಜಾಹೀರಾತು ಮಾಡುವುದು ಅಥವಾ ಆ ಸ್ಥಳಗಳಲ್ಲಿ ಯಾವುದೇ ಖಾಲಿ ಸ್ಥಾನದ ಜಾಗದಲ್ಲಿ, ತುದಿ ಅಥವಾ ಪಕ್ಕದಲ್ಲಿ ಮೊಬೈಲ್ ಟವರ್‌ಗಳನ್ನು ನಿಲ್ಲಿಸತಕ್ಕದ್ದಲ್ಲ*

*ಅಥವಾ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ. ಉಪವಿಧಿಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅನುಮತಿಯನ್ನು ನೀಡಬಹುದು.*

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಬಲವಾಗಿ ಅವಲಂಬಿಸಿರುವ ಈರಗೆಂಟಪ್ಪ ಅಲಿಯಾಸ್ ವೀರಗೆಂಟಪ್ಪ–ವಿರುದ್ಧ–ಹನುಮಂತ್ ಮತ್ತು ಇತರರು ಮೊಕದ್ದಮೆಯಲ್ಲಿ (ಮೇಲೆ ಹೇಳಲಾದ) ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು, ಮೊದಲು ಈ ನ್ಯಾಯಾಲಯದೊಂದಿಗೆ, ವ್ಯವಹರಿಸಿದೆ.

12. ಮೊಕದ್ದಮೆಯ ವಾಸ್ತವಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಸದರಿ ವಿಭಾಗೀಯ ಪೀಠದ ತೀರ್ಪಿನ ಓದುವಿಕೆಯು, ಅರ್ಜಿದಾರ ***ಈರಗಂಟೆಪ್ಪ ಅಲಿಯಾಸ್ ವೀರಗಂಟಪ್ಪ*** ಇವರು ತಾನು 'ಸಿಂಪಿ' ಜಾತಿಗೆ ಸೇರಿದವನೆಂಬುದಾಗಿ ***ಸುಳ್ಳು ಜಾತಿ ಪ್ರಮಾಣಪತ್ರ ಹಾಜರುಪಡಿಸಿರುವುದರಿಂದಾಗಿ*** ಉದ್ಭವಿಸಿದ ಆ ಮೊಕದ್ದಮೆಯಲ್ಲಿ ನ್ಯಾಯಾಲಯದ ಮುಂದೆ ವಿವಾದವಿದೆ ಎಂದು ಬಹಿರಂಗಪಡಿಸಬೇಕಾಗಿತ್ತು. ಆದರೆ ಅರ್ಜಿದಾರನು ವಾಸ್ತವವಾಗಿ 'ಲಿಂಗಾಯತ' ಜಾತಿಗೆ ಸೇರಿದವನಾಗಿದ್ದಾನೆಂದು ಪ್ರಮಾಣಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ದೂರುದಾರರು ಹಾಜರುಪಡಿಸಿದ್ದಾರೆ. ಹಾಗಾಗಿ, ಆತನ ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಮೀಸಲು ಸ್ಥಾನಕ್ಕೆ ಸ್ಪರ್ಧಿಸಿದ ಆತನ ಚುನಾವಣೆಯು 'ಅನರ್ಹತೆ'ಯಾಗುತ್ತದೆಯೇ ಮತ್ತು ಆ ಉದ್ದೇಶಕ್ಕಾಗಿ, ಅಧಿನಿಯಮದ 43ಎ ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ಆತನ ವಿರುದ್ಧ ಹೂಡಬಹುದೇ ಅಥವಾ ಇಲ್ಲವೇ ಎಂಬ ವಿವಾದ ಉದ್ಭವಿಸಿತ್ತು. ಸದರಿ ಪ್ರಶ್ನೆಗೆ ಉತ್ತರಿಸುತ್ತಾ, ಈ ನ್ಯಾಯಾಲಯದ ವಿಭಾಗೀಯ ಪೀಠವು ತೀರ್ಪಿನ 6ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ತೀರ್ಪು ನೀಡಿದೆ.

*"6. ಮುಖ್ಯ ವಿವಾದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ನಾವು 43ಎ ಪ್ರಕರಣದ ಉಪಬಂಧಗಳ ಕಡೆಗೆ ಬಹಳ ಎಚ್ಚರಿಕೆಯಿಂದ ನಮ್ಮ*

*ಗಮನ ಹರಿಸಿದ್ದೇವೆ.* ***ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು ಎಸಗುವ ದುರ್ನಡತೆಯ ವಿವಿಧ ಬಗೆಗಳನ್ನು ಕುರಿತು ವಿಚಾರಣೆ ನಡೆಸಲು ಈ ಪ್ರಕರಣವು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಅದೂ ಸಹ ಸದುದ್ದೇಶಗಳಗಾಗಿ ಎಂಬುದು ಸತ್ಯ ಹಾಗೂ ವ್ಯಕ್ತಿಯನ್ನು ಪದದಿಂದ ತೆಗೆದುಹಾಕಲು ಅಭ್ಯರ್ಥಿಯನ್ನು ಅನರ್ಹಗೊಳಸಿದ ವಿಚಾರಣೆಯ ಫಲತಾಂಶವು ಪ್ರತಿಕೂಲವಾಗಿದ್ದರೆ,*** *ವಿಧಾನಮಂಡಲವು ಸದುದ್ದೇಶಗಳಿಗಾಗಿ, 43ಎ ಪ್ರಕರಣದ ಪರಿಧಿ ಮತ್ತು ವ್ಯಾಪ್ತಿಯನ್ನು ಪರಿಮಿತಗೊಳಿಸುತ್ತದೆ ಮತ್ತು ಇತರ ಇಂತಹುವೇ ಹಲವು ಉಪಬಂಧಗಳಿಗೆ ಸಂಬಂಧಿಸಿದಂತೆ ಈ ಉಪಬಂಧಗಳನ್ನು ಅವಲೋಕಿಸಿದ ನಂತರ,* ***ಪದವನ್ನು ವಹಿಸಿಕೊಳ್ಳುವ ದಿನಾಂಕಕ್ಕೆ ಮೊದಲನ ಇತರ ವಿಷಯಗಳಗೆ ಸಂಬಂಧಿಸಿದಂತೆ ಎಸಗಬಹುದಾಗಿರುವ ದುರ್ನಡತೆಯ ವಿವಿಧ ಕೃತ್ಯಗಳು, 43ಎ ಪ್ರಕರಣದ ಅಡಿಯಲ್ಲಿ ವಿಚಾರಣೆಯ ವಸ್ತು ವಿಷಯವಾಗಿ ಸಹ ರೂಪುಗೊಳ್ಳಬಹುದಾಗಿದೆ ಎಂದು*** *ಮೂಲ ಅರ್ಜಿದಾರನು ಮಂಡಿಸಿದ ವಾದವನ್ನು ಒಪ್ಪುವುದು ಅತ್ಯಂತ ಅಪಾಯಕಾರಿಯಾಗಬಹುದಾಗಿದೆ ಎಂಬುದು ನಮಗೆ ಕಂಡುಬಂದಿತು. ಯಾವುದೇ ರೀತಿಯಲ್ಲೂ ಪ್ರಕರಣವನ್ನು ಉಲ್ಲಂಘಿಸಲು ಅಥವಾ ಆ ವಿಷಯದ ಸಂಬಂಧದಲ್ಲಿ ಈ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವಂಥ ಸಾಮಾನ್ಯ ಸನ್ನಿವೇಶವನ್ನು ಗಮನದಲ್ಲಿರಿಸಿಕೊಂಡು ಸರಳ ಕಾರಣಕ್ಕಾಗಿ ಶಾಸನರಚನೆಯ ಉದ್ದೇಶದ ವಿರುದ್ಧ ಹೋಗಲು ಅಥವಾ ಆ ವಿಷಯ ಸಂಬಂಧದಲ್ಲಿ ಎಲ್ಲ ಚುನಾಯಿತ ಸಂಸ್ಥೆಗಳ ವಿಷಯದಲ್ಲಿ ದ್ವೇಷಾಸೂಯೆಗಳಿರುವಂಥ ದೂರುಗಳಿಗೆ ಆಸ್ಪದ ನೀಡಿ ವಾಸ್ತವವಾಗಿ ಸಂಕಷ್ಟಗಳ ಸಂಪುಟವನ್ನು ತೆರೆಯಲು ಅಥವಾ ಯಾವುದೇ ಸಂದರ್ಭದಲ್ಲಿ ಎಲ್ಲ ತೆರನಾದ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಕಣ್ಣಿಗೆ ರಾಚುವಂತೆ ಮಾಡುವ ಯಾವ ವಿಷಯಕ್ಕೂ ನಾವು ಸಿದ್ಧರಿಲ್ಲ ಮತ್ತು ಹಾಗೆ ಮಾಡುವುದು ವಾಸ್ತವವಾಗಿ ಅನರ್ಥಕ್ಕೆಡೆ ಮಾಡಿಕೊಡುವುದು. ಅಭ್ಯರ್ಥಿಯು ಪದಧಾರಣ ಮಾಡಿದ ಕಾಲಾವಧಿಯ ಸಂಬಂಧದಲ್ಲಿ ಉದ್ಭವಿಸುವಂಥ ಸನ್ನಿವೇಶಗಳಿಗೆ ಈ ಪ್ರಕರಣವು*

*ಪರಿಮಿತವಾಗಿದ್ದು, ಅವುಗಳೇ ನ್ಯಾಯಾಲಯವು ಜಾರಿ ಮಾಡಬೇಕಾಗಿರುವ ಮಾನದಂಡಗಳಾಗಿವೆ. ಈ ಹಿನ್ನಲೆಯಲ್ಲಿ, ಅಭ್ಯರ್ಥಿಯು ಪದವನ್ನು ವಹಿಸಿಕೊಂಡ ನಂತರ ಮಾತ್ರ ಎಸಗುವಂಥ ದುರ್ನಡತೆಯ ಕೃತ್ಯಗಳಿಗೆ ಸ್ಪಷ್ಟವಾಗಿ ಪರಿಮಿತಗೊಳಿಸಿರುವಂತೆ 43ಎ ಪ್ರಕರಣಕ್ಕೆ ನಾವು ಅರ್ಥವಿವರಣೆ ನೀಡಬೇಕಾದ ಅಗತ್ಯವಿದೆ ಹಾಗೂ ಭ್ರಷ್ಟ ಆಚರಣೆಗಳು, ದುರ್ನಡತೆ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಇತರ ಕಾನೂನುಬಾಹಿರ ಕ್ರಮಗಳಿಗೆ ಸಂಬಂಧಿಸಿದಂತೆ ಸಹ ಪ್ರತ್ಯೇಕವಾಗಿ ವ್ಯವಹರಿಸಬೇಕಾಗುತ್ತದೆ. ಅಧಿನಿಯಮವು ಸ್ವತಃ 19 ಮತ್ತು 20ನೇ ಪ್ರಕರಣಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವ ಸಂಬಂಧದಲ್ಲಿ ಉಪಬಂಧಗಳನ್ನು ಕಲ್ಪಿಸುತ್ತದೆ. ಈ ಸನ್ನಿವೇಶಗಳಿಗೆ ಸಂಬಂಧ ಪಡುವಷ್ಟರಮಟ್ಟಿಗೆ ಹೇಳುವುದಾದರೆ, ಸನ್ನಿವೇಶಗಳು ಹಾಗೆ ಸಮರ್ಥಿಸುವಲ್ಲಿ, ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಅಧಿಕಾರ ವ್ಯಾಪ್ತಿ ಚಲಾಯಿಸಲು, ಉಚ್ಚ ನ್ಯಾಯಾಲಯಕ್ಕೆ ಸೂಕ್ತ ಮೊಕದ್ದಮೆಗಳಲ್ಲಿ ವ್ಯವಹರಿಸಲು ಸಾಕಷ್ಟು ವ್ಯಾಪ್ತಿ ಇದೆ. ಪ್ರಸ್ತುತ ರಿಟ್ ಅರ್ಜಿಯಲ್ಲಿನ ಕ್ರಮದ ಕಾರಣವು, ಅಧಿನಿಯಮದ 43ಎ ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರ ಸಂಖ್ಯೆ-1 ಇವರು ಸಲ್ಲಿಸಿದ ದೂರಿಗೆ ಸೀಮಿತವಾಗಿತ್ತು ಮತ್ತು* ***43-ಎ ಪ್ರಕರಣದಷ್ಟರಮಟ್ಟಿಗೆ ದೂರನ್ನು ತಪ್ಪಾಗಿ ಗ್ರಹಿಸಿರುವುದು ಪ್ರಸ್ತುತ ಆರೋಪಗಳಿಗೆ ಅನ್ವಯವಾಗುವುದಿಲ್ಲ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ಈ ಅಭಿಪ್ರಾಯಗಳು ಪ್ರಸ್ತುತ ವ್ಯವಹರಣೆಗೆ ಸಂಬಂಧಪಟ್ಟಿವೆ ಮತ್ತು ಅವು ಇತರ ಯಾವುವೇ ವ್ಯವಹರಣೆಗಳ ಆಧಾರದ ಮೇಲೆ ಇತರ ಯಾವುದೇ ಸಂಬಂಧ*** *ಹೊಂದಿರುವುದಿಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ".*

13. ಈ ನ್ಯಾಯಾಲಯದ ಪರಿಗಣಿತ ಅಭಿಪ್ರಯದಲ್ಲಿ, ಸದರಿ ವಿಭಾಗೀಯ ಪೀಠದ ತೀರ್ಪಿನ ಆಧಾರದ ಮೇಲೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿತರಾಗಿರುವುದು, ಪ್ರಸ್ತುತ ಅರ್ಜಿದಾರರ ಮೊಕದ್ದಮೆಗೆ ಪೂರಕವಾಗಿರುವುದಕ್ಕೆ

ಬದಲಾಗಿ, ಪ್ರತ್ಯರ್ಜಿದಾರ–ರಾಜ್ಯದ ಮೊಕದ್ದಮೆಗೆ ಪೂರಕವಾಗಿದೆ. ***ಈರಗಂಟೆಪ್ಪ*** ಇವರ ಮೊಕದ್ದಮೆಯಲ್ಲಿ (ಮೇಲೆ ಹೇಳಿದ) ನ್ಯಾಯಾಲಯದ ಮುಂದೆ ತರಲಾಗಿದ್ದ ಮೊಕದ್ದಮೆಯು, ಅರ್ಜಿದಾರನು ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಪದವನ್ನು ವಹಿಸಿಕೊಳ್ಳುವ ಮೊದಲು ನಡೆದ ಘಟನೆಯಾಗಿದೆ. ಎಂದರೆ, ಮೀಸಲು ಸ್ಥಾನದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಕೋರುವ ಸಲುವಾಗಿ ಸುಳ್ಳು ಜಾತಿ ಪ್ರಮಾಣಪತ್ರವನ್ನು ಹಾಜರುಪಡಿಸಿದ ಮೊಕದ್ದಮೆಯಾಗಿದೆ. ಅಂಥ ಸದಸ್ಯನು 'ಸದಸ್ಯನಾಗಿ ತನ್ನ ಪದ ವಹಿಸಿಕೊಂಡ ಪದಾವಧಿಯಲ್ಲಿ' ಎಸಗಿದ ದುರ್ನಡತೆಗೆ ಯಾವುದೇ ರೀತಿಯಲ್ಲಿ ಸಂಬಂಧಿಸಿರುವುದಿಲ್ಲ. 1993ರ ಅಧಿನಿಯಮದ 12ನೇ ಪ್ರಕರಣದಲ್ಲಿ ಪರ್ಯಾಲೋಚಿಸಿದಂತೆ ಅನರ್ಹತೆಯಲ್ಲಿ ಪರಿಣಮಿಸಬಹುದಾಗಿರುವ ದುರ್ನಡತೆಯು, ಸದಸ್ಯನಾಗಿ ಸಂಬಂಧಪಟ್ಟ ವ್ಯಕ್ತಿಯ ಪದಾವಧಿಯಲ್ಲಿ ಸದಸ್ಯನು ಎಸಗಿದ ದುರ್ನಡತೆಯಾಗಿದೆಯೇ ಹೊರತು, ಸಾಮಾನ್ಯ ವ್ಯಕ್ತಿಯಾಗಿ ಅಥವಾ ***ಈರಗಂಟೆಪ್ಪ***ರವರ ಮೊಕದ್ದಮೆಯಲ್ಲಿಯಂತೆ (ಮೇಲೆ ಹೇಳಿದ) ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿ ಒಬ್ಬ ಅಭ್ಯರ್ಥಿಯಾಗಿ ಆ ಪದವನ್ನು ವಹಿಸಿಕೊಳ್ಳುವ ಮುಂಚೆ ಆತನು ಮಾಡಿದ ಯಾವುದೇ ಕೃತ್ಯವಾಗಿರುವುದಿಲ್ಲ. ಸಹಜವಾಗೇ 43ಎ ಪ್ರಕರಣದ ಉಪಬಂಧಗಳು ಮತ್ತು ಅಧಿನಿಯಮದ 12ನೇ ಪ್ರಕರಣದ ಮೇರೆಗಿನ ಅನರ್ಹತೆಯು, ಸುಸಂಗತ ಕಾಲದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಆತನನ್ನು ಪರಿಗಣಿಸಿದ್ದರೆ ಮಾತ್ರ ಆ ವ್ಯಕ್ತಿಗೆ ಸಂಬಂಧಪಡುವುದು. ಸುಳ್ಳು ಜಾತಿ ಪ್ರಮಾಣಪತ್ರವನ್ನು ಹಾಜರುಪಡಿಸಿರುವುದನ್ನು, ಗ್ರಾಮ ಪಂಚಾಯಿತಿಯ "ಸದಸ್ಯನಾಗಿ" ಸಂಬಂಧಪಟ್ಟ ವ್ಯಕ್ತಿಯ ಕಡೆಯಿಂದ ನಡೆದುಕೊಳ್ಳಲಾಗಿದೆ ಅಥವಾ ದುರ್ನಡತೆ ಎಸಗಲಾಗಿದೆ ಎಂದು ಹೇಳಲಾಗುವುದಿಲ್ಲವಾದ್ದರಿಂದ, ಸಹಜವಾಗಿಯೇ, ಅರ್ಜಿದಾರನು ಸುಳ್ಳು ಪ್ರಮಾಣಪತ್ರವನ್ನು ಒದಗಿಸಿರುವುದು ಆತನ ವಿರುದ್ಧ ನೀಡಿದ ದೂರು, ಅಧಿನಿಯಮದ 43ಎ ಪ್ರಕರಣದ ಅಡಿಯಲ್ಲಿ ಅರ್ಜಿದಾರನನ್ನು ಪದದಿಂದ ತೆಗೆದುಹಾಕುವುದಕ್ಕಾಗಿ ವಿಚಾರಣೆಯನ್ನು ನಡೆಸುವ ಮೂಲಕ ಆತನ ಅನರ್ಹತೆಯಲ್ಲಿ ಪರಿಣಮಿಸುವುದಿಲ್ಲವೆಂದು ನ್ಯಾಯಾಲಯವು ತೀರ್ಮಾನಿಸಿದೆ ಮತ್ತು ಹಾಗೆ ತೀರ್ಮಾನಿಸಿರುವುದು ಸರಿಯಾದುದಾಗಿದೆ.

14. ಇಲ್ಲಿ, ಪ್ರಸ್ತುತ ಮೊಕದ್ದಮೆಯಲ್ಲಿ, ವಾಸ್ತವಾಂಶಗಳು ಅನ್ಯಥಾ ನ್ಯಾಯಯುತವಾಗಿವೆ ಅರ್ಜಿದಾರನಿಗೆ ಪ್ರಶ್ನಿತ ಕಾರಣ ತೋರಿಸುವ ನೋಟೀಸನ್ನು ನೀಡುವ ಮೂಲಕ ಪ್ರಸ್ತುತ ಮೊಕದ್ದಮೆಯಲ್ಲಿ ವಿಚಾರಣೆ ನಡೆಸಬೇಕೆಂದು ಕೋರಿರುವುದು, ಸೂಚಿತ ಸಮಯಕ್ಕೆ ಮುಂಚಿನ ಅವಧಿಗಾಗಿರಬಹುದಾದ ಆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ 'ಅಧ್ಯಕ್ಷ'ನಾಗಿ ಪದವನ್ನು ವಹಿಸಿಕೊಳ್ಳುವಾಗ, ಸದಸ್ಯನಾಗಿ ಆತನು ಎಸಗಿದನೆಂದು ಆರೋಪಿಸಲಾದ ಕೃತ್ಯ ಅಥವಾ ದುರ್ನಡತೆ ಅಥವಾ ಘಟನೆಯಾಗಿದೆ. ಈ ಪದಾವಧಿಯಲ್ಲಿ ಸದಸ್ಯನು ಎಸಗಿದನೆಂದು ಆರೋಪಿಸಲಾದ ಆತನ ದುರ್ನಡತೆಗಾಗಿ ಮಾತ್ರ ಆತನಿಗೆ 43ಎ ಪ್ರಕರಣದ ಯಾವುದೇ ನಿರ್ಬಂಧಿತ ಅನ್ವಯವನ್ನು ಎತ್ತಿ ಹಿಡಿಯಲು ಯಾವುದೇ ಆಧಾರವಾಗಿ ಈ ನ್ಯಾಯಾಲಯಕ್ಕೆ ಕಂಡುಬಂದಿರುವುದಿಲ್ಲ. ಹಾಗೆ ತೀರ್ಮಾನಿಸುವುದು, ಸದಸ್ಯನಾಗಿ ಅಥವಾ 'ಅಧ್ಯಕ್ಷ'ನಾಗಿ ಅಥವಾ 'ಉಪಾಧ್ಯಕ್ಷ'ನಾಗಿ ಹಿಂದಿನ ಅವಧಿಯಲ್ಲಿನ ದುರ್ನಡತೆಯ ಆರೋಪಿಸಲಾದ ಘಟನೆಯು ತರುವಾಯದಲ್ಲಿ ಬೆಳಕಿಗೆ ಬಂದರೆ, ಆ ದುರ್ನಡತೆ ಕುರಿತು ಯಾವುದೇ ವಿಚಾರಣೆಯನ್ನು ತಡೆಯುವುದು 2015–2020ರಲ್ಲಿನ ಪ್ರಸ್ತುತ ಅವಧಿಗೆ ಪ್ರಸ್ತುತ ಅರ್ಜಿದಾರನು ಪುನರ್–ಆಯ್ಕೆಯಾಗಿರುತ್ತಾನೆ. ಈ ಅವಧಿಗೆ ಆತನ ತೆಗೆದುಹಾಕುವಿಕೆಗೆ ಅಥವಾ ಅನರ್ಹತೆಗೆ ಕಾರಣವಾಗಬಹುದಾದ 43ಎ ಪ್ರಕರಣದ ಮೇರೆಗೆ ಆತನ ವಿರುದ್ಧ ವ್ಯವಹರಣೆಯನ್ನು ನಡೆಸಲು ಮುಂದುವರಿಯುವ ಯಾವ ಪ್ರಶ್ನೆಯೂ ಇರಲಿಲ್ಲ ಎಂಬುದು ಸುಸ್ಪಷ್ಟ. ಇದಕ್ಕೆ ಕಾರಣ, ಆತನಿಗೆ ಪ್ರಶ್ನಿತ ಕಾರಣ ತೋರಿಸುವ ನೋಟೀಸನ್ನು ನೀಡಿದ ಸಮಯದಲ್ಲಿ, ಆತನು ಸದರಿ ಗ್ರಾಮ ಪಂಚಾಯಿತಿಯ ಸದಸ್ಯನಾಗಿದ್ದುದು, 43ಎ ಪ್ರಕರಣದ ಅಡಿಯಲ್ಲಿ ಆತನ ವಿರುದ್ಧ ವಿಚಾರಣೆ ನಡೆಸುವ ಪ್ರಶ್ನೆಯನ್ನು ಎತ್ತಬಹುದಾಗಿದೆ ಎಂಬುದಾಗಿದೆ. ಇದು ಹಾಗಿದ್ದಿದ್ದ ಪಕ್ಷದಲ್ಲಿ, ಸಾರ್ವಜನಿಕ ಕಚೇರಿಗಳಲ್ಲಿ ಪದವನ್ನು ವಹಿಸಿಕೊಳ್ಳುವ ಚುನಾಯಿತ ವ್ಯಕ್ತಿಗಳನ್ನು, ಸದಸ್ಯನಾಗಿ ಅಥವಾ 'ಅಧ್ಯಕ್ಷನಾಗಿ' ಅವರು ಸಂಬಂಧಪಟ್ಟ ಪದಾವಧಿಯಲ್ಲಿ ಮಾಡಬಹುದಾದ ಏನೇ ಕಾರ್ಯಕ್ಕೆ ಆ ಅವಧಿಯು ಪೂರ್ಣಗೊಂಡ ನಂತರ ಅವರನ್ನು ಉತ್ತರದಾಯಿಯನ್ನಾಗಿಸಬಹುದು ಎಂಬ ಪರಿಕಲ್ಪನೆಯ ವಿರುದ್ಧವೇ ಅದು ಪ್ರತಿಕೂಲಕರವಾಗುವುದು. ಅಂಥ ಒಂದು ಉದ್ದೇಶವನ್ನು ಅಧಿನಿಯಮದ ಯಾವುವೇ

ಉಪಬಂಧಗಳಿಗೆ, ಅದರಲ್ಲೂ 1993ರ ಸದರಿ ಅಧಿನಿಯುಮದ 43ಎ ಪ್ರಕರಣದಿಂದಲಂತೂ ತರ್ಕ ಮಾಡಲಾಗುವುದಿಲ್ಲ.

15. ***ಈರಗಂಟೆಪ್ಪ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಒಬ್ಬ ವ್ಯಕ್ತಿಯು, ಸದಸ್ಯನಾಗಿ ಅಥವಾ ಅಧ್ಯಕ್ಷನಾಗಿ ತನ್ನ ಪದಾವಧಿಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಕೆಲವು ತಪ್ಪುಗಳನ್ನು ಎಸಗಿದ್ದರೆ ಮತ್ತು ಅಧಿನಿಯಮದ 19ನೇ ಪ್ರಕರಣದ ಮತ್ತು 20ನೇ ಪ್ರಕರಣದ ಅಡಿಯಲ್ಲಿ ಚುನಾವಣೆಯನ್ನೇ ಅಸಿಂಧುವೆಂದು ಘೋಷಿಸಬಹುದಾದಲ್ಲಿ, ಆ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ಅಧಿನಿಯಮದ 19 ಮತ್ತು 20ನೇ ಪ್ರಕರಣಗಳ ಅಡಿಯಲ್ಲಿ, ಅಧಿನಿಯಮದಲ್ಲೇ ಉಪಬಂಧಗಳನ್ನು ರಚಿಸಲಾಗಿದೆಯೆಂದು ವಿಭಾಗೀಯ ಪೀಠವು ಸ್ವತಃ ಗಮನಿಸಿದೆ. ಚುನಾವಣೆಯ ದಿನಾಂಕಕ್ಕೆ ಮುಂಚಿನ ದುರ್ನಡತೆ ಅಥವಾ ಕೃತ್ಯ ಅಥವಾ ಘಟನೆಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು 1993ರ ಅಧಿನಿಯಮದಲ್ಲೇ ಅಧಿನಿಯಮಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಉಪಬಂಧವನ್ನು ಕಲ್ಪಿಸಿರುವುದರಿಂದ, ವಿಭಾಗೀಯ ಪೀಠವು, ಸದಸ್ಯತ್ವದಿಂದ ಸಂಬಂಧಪಟ್ಟ ಸದಸ್ಯನನ್ನು ತೆಗೆದುಹಾಕಲು ಅಧಿನಿಯಮದ 43ಎ ಪ್ರಕರಣವನ್ನು 'ಸದಸ್ಯ'ನಾಗಿ ಅಥವಾ 'ಅಧ್ಯಕ್ಷ'ನಾಗಿ ತನ್ನ ಪದಾವಧಿಯಲ್ಲಿ ಸಂಬಂಧಪಟ್ಟ ವ್ಯಕ್ತಿಯು ಎಸಗಿದನೆಂದು ಆರೋಪಿಸಲಾದ ದುರ್ನಡತೆಗಾಗಿ ಆತನ ವಿರುದ್ಧ ವಿಚಾರಣೆಯನ್ನು ಎದುರಿಸುವ ಅಧಿನಿಯಮದ 43ಎ ಪ್ರಕರಣದ ಮೇರೆಗೆ ಕೋರಲು ಸಾಧ್ಯವಿಲ್ಲ.

16. ಆದುದರಿಂದ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ ಸದರಿ ತೀರ್ಪು ವಾಸ್ತವಾಂಶಗಳ ಆಧಾರದ ಮೇಲೆ ಸುಸ್ಪಷ್ಟವಾಗಿದೆ ಮಾತ್ರವಲ್ಲದೆ, ಸದರಿ ತೀರ್ಪಿನ ತೀರ್ಮಾನದ ಕಾರಣವು, ಸದಸ್ಯತ್ವದಿಂದ ತೆಗೆದುಹಾಕಲು 43ಎ ಪ್ರಕರಣದ ಮೇರೆಗೆ ಆಲೋಚಿಸಿದ ವಿಚಾರಣೆಯನ್ನು, ಹಿಂದಿನ ಪದಾವಧಿಯಲ್ಲಿ ಸದಸ್ಯನಾಗಿ ಅಥವಾ 'ಅಧ್ಯಕ್ಷ'ನಾಗಿ ಆತನು ಎಸಗಿದನೆಂದು ಆರೋಪಿಸಲಾದ ದುರ್ನಡತೆಗಾಗಿ ಅರ್ಜಿದಾರನ ವಿರುದ್ಧ ಹೂಡಬಹುದಾಗಿದೆ ಎಂದು ಪ್ರತ್ಯರ್ಜಿದಾರ–ರಾಜ್ಯದ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಸ್ಪಷ್ಟವಾಗಿ ಸಮರ್ಥಿಸುತ್ತದೆ.

17. ನಿಸ್ಸಂದಿಗ್ಧ ಕಾರಣಗಳಿಗಾಗಿ, ನ್ಯಾಯಾಲಯವು, ರಿಟ್ ಅರ್ಜಿಯು ಕಾರಣ ತೋರಿಸುವ ನೋಟೀಸಿನ ವಿರುದ್ಧ ಮಾತ್ರ ನಿರ್ದೇಶಿಸುವುದರಿಂದ ದೂರಿನಲ್ಲಿ ಮಾಡಿದ ಆಪಾದನೆಗಳ ಗುಣಾರ್ಹತೆಗಳನ್ನಾಗಲಿ ಅಥವಾ ಅರ್ಜಿದಾರನ ಸಂಭವನೀಯ ವಿವರಣೆಯನ್ನಾಗಲಿ, ಮೊಕದ್ದಮೆಯ ಗುಣಾರ್ಹತೆಗಳನ್ನು ಪರಿಶೀಲಿಸಿರುವುದಿಲ್ಲ ಮತ್ತು ಈ ನ್ಯಾಯಾಲಯವು, ಅಂಥ ಕಾರಣ ತೋರಿಸುವ ನೋಟೀಸನ್ನು ಅಧಿನಿಯಮದ 43ಎ ಪ್ರಕರಣದ ಅಡಿಯಲ್ಲಿ ಅರ್ಜಿದಾರನಿಗೆ ಸಿಂಧುವಾಗಿ ನೀಡಬಹುದಾಗಿದೆ ಎಂಬ ನಿರ್ಣಯಕ್ಕೆ ಬಂದಿದೆ.

18. ಆದುದರಿಂದ, ಸದರಿ ಕಾರಣ ತೋರಿಸುವ ನೋಟೀಸಿನ ಅನುಸರಣೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಕಾರಣ ತೋರಿಸುವುದು ಅರ್ಜಿದಾರನಿಗೆ ಬಿಟ್ಟ ವಿಷಯವಾಗಿದೆ.

19. ಆದುದರಿಂದ, ರಿಟ್ ಅರ್ಜಿಯು ಅವಧಿಪೂರ್ವದ್ದಾಗಿದೆ ಮತ್ತು ಹಾಗೆಂದು ವಜಾಗೊಳಿಸುವುದಕ್ಕೆ ತಕ್ಕುದಾಗಿದೆ. ಆದುದರಿಂದ, ಅರ್ಜಿದಾರನಿಗೆ, ಕಾರಣ ತೋರಿಸುವ ನೋಟೀಸಿನ ಅನುಸರಣೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ತನ್ನ ಉತ್ತರ ಮತ್ತು ವಿವರಣೆ ಒದಗಿಸಲು ನಿರ್ದೇಶಿಸಲಾಗಿದೆ ಹಾಗೂ ಮೊದಲ ಹಂತದಲ್ಲಿ ದಿನಾಂಕ 15.12.2016ರಂದು ಸದರಿ ಪ್ರಾಧಿಕಾರದ ಮುಂದೆ ಹಾಜರಾಗಬಹುದು ಮತ್ತು ಸದರಿ ಸಂಬಂಧಪಟ್ಟ ಪ್ರಾಧಿಕಾರವು ಅರ್ಜಿದಾರನ ಅಹವಾಲನ್ನು ಆಲಿಸುವ ಸೂಕ್ತ ಅವಕಾಶವನ್ನು ಆತನಿಗೆ ನೀಡುವುದೆಂದು ಹಾಗೂ ಆತನ ವಾದಗಳ ಸಮರ್ಥನೆಯಲ್ಲಿ ಮುಖ್ಯ ಸಾಕ್ಷ್ಯಗಳಿಗೆ ಆತನಿಗೆ ಅವಕಾಶವನ್ನು ಸಹ ನೀಡುವುದೆಂದು ಮತ್ತು ನಂತರ ಕಾನೂನಿಗನುಸಾರವಾಗಿ ಸೂಕ್ತ ಆದೇಶಗಳನ್ನು ಹೊರಡಿಸುವುದೆಂದು ನಿರೀಕ್ಷಿಸಲಾಗಿದೆ.

ಈ ಅಭಿಪ್ರಾಯಗಳೊಂದಿಗೆ ಮತ್ತು ನಿರ್ದೇಶನಗಳೊಂದಿಗೆ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ. ವೆಚ್ಚಕ್ಕೆ ಸಂಬಂಧಪಟ್ಟಂತೆ ಯಾವುದೇ ಆದೇಶವಿಲ್ಲ.